ಮಹೇಶ್ವರ ಹುರುಕಡ್ಲಿ

ಕಲೆ: ಗಣೇಶ ಆಚಾರ್ಯ



# ಸೋಮನ ಸಾಹಸ

ಸಡಗರಪುರವೆಂಬ ಹಳ್ಳಿಯಲ್ಲಿ ಸೋಮನೆಂಬ ಬುದ್ಧಿವಂತ ಹುಡುಗನಿದ್ದ. ಮನೆಯಲ್ಲಿ ಅತಿಯಾದ ಬಡತನವಿದ್ದುದರಿಂದ ಅವನು ತನ್ನ ವಿದ್ಯಾಭ್ಯಾಸವನ್ನು ಅರ್ಧಕ್ಕೇ ನಿಲ್ಲಿಸಿ, ದುಡಿಯಲು ಪಕ್ಕದ ಊರಿನ ಸಾಹುಕಾರನ ಮನೆಗೆ ಆಗಾಗ ಹೋಗುತ್ತಿದ್ದ.

ಒಂದು ದಿನ ಸೋಮ ಬೆಳಗಿನಿಂದ ಸಂಜೆಯವರೆಗೆ ದುಡಿದು, ಸಾಹುಕಾರರಿಂದ ಕೂಲಿಯ ಹಣಪಡೆದು ಮರಳಿ ಊರಿಗೆ ನಡೆದು ಬರುತ್ತಿದ್ದ. ದಾರಿಯಲ್ಲಿ ಇದ್ದಕ್ಕಿದ್ದಂತೆ ನಾಲ್ಕಾರು ಜನ ಕಳ್ಳರು ಸೋಮನ ಮೇಲೆರಗಿ ಅವನ ಹಣವನ್ನೆಲ್ಲ ಕಸಿದುಕೊಂಡರು. ಆಗ ಸೋಮ, 'ನಾನು ಬಡವ, ನನ್ನ ಹಣವನ್ನು ಕೊಟ್ಟುಬಿಡಿ' ಎಂದು ಅಳುತ್ತಾ ಬೇಡಿಕೊಂಡ. ಆದರೆ, ಕಳ್ಳರು ಅವನ ಮಾತಿಗೆ ಕಿವಿಗೊಡದೆ ಹಣದೊಂದಿಗೆ ಪರಾರಿಯಾದರು. ಸೋಮ ಒಬ್ಬಂಟಿಯಾಗಿದ್ದರಿಂದ ಕಳ್ಳರನ್ನು